ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 66 ಮ್ಯೆಅಪ್ರಾ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 6.3.2010.

ಸುತ್ತೋಲೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಡಿ ಮಹಾ ಯೋಜನೆಗಳಲ್ಲಿ ಉದ್ಯಾನವನ/ ಬಯಲು ಜಾಗೆ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಮೀನುಗಳ ಭೂ ಉಪಯೋಗ ಬದಲಾವಣೆ ಮಾಡಲು ಅನುಸರಿಸಬೇಕಾದ ಕ್ರಮದ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: ಸುತ್ತೋಲೆ ಸಂಖ್ಯೆ.ನಅಇ 196 ಬೆಂರೂಪ್ರಾ 2005, ದಿನಾಂಕ: 22.12.05.

* * * * *

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(1) ರನ್ವಯ ರಾಜ್ಯದ ವಿವಿಧ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ರೂಪಿಸಿರುವ ಮಹಾ ಯೋಜನೆಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಹಲವಾರು ಪ್ರದೇಶಗಳನ್ನು ಉದ್ಯಾನವನ ಮತ್ತು ಬಯಲು ಜಾಗ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದ್ದು, ಈ ಜಮೀನುಗಳನ್ನು ಮಹಾ ಯೋಜನೆಯು ಜಾರಿಗೆ ಬಂದ ದಿನಾಂಕದಿಂದ ೨ ವರ್ಷಗಳ ಕಾಲಮಿತಿಯೊಳಗಾಗಿ ಸದರಿ ಉದ್ದೇಶಕ್ಕಾಗಿ ಉಪಯೋಗಿಸಲು ಸಂಬಂದಪಟ್ಟ ಪ್ರಾಧಿಕಾರಗಳು ಭೂ ಸ್ವಾಧೀನಪಡಿಸಿಕೊಂಡು ಭೂ ಮಾಲೀಕರುಗಳಿಗೆ ಪರಿಹಾರ ಧನ ಪಾವತಿಸಬೇಕಾಗಿದೆ. ಆದರೆ, ಪ್ರಾಧಿಕಾರಗಳು ಆ ಪ್ರಕಾರ ಭೂ ಸ್ವಾಧೀನಪಡಿಸಿಕೊಂಡು ಸದರಿ ಜಮೀನುಗಳ ಭೂ ಮಾಲೀಕರುಗಳಿಗೆ ಪರಿಹಾರ ಧನವನ್ನು ವಿತರಿಸುವಷ್ಟು ಆರ್ಥಿಕವಾಗಿ ಸಶಕ್ತವಾಗಿಲ್ಲ. ಈ ಕಾರಣದಿಂದ ವಿಗಧಿತ ೨ ವರ್ಷಗಳ ಕಾಲಮಿತಿಯೊಳಗಾಗಿ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳದ ಜಮೀನುಗಳ ಭೂ ಮಾಲೀಕರುಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರನ್ವಯ ಅವರು ಅಪೇಕ್ಷಿಪಿಸುವ ಉದ್ದೇಶಕ್ಕೆ ಅಂತಹ ಜಮೀನುಗಳನ್ನು ಉಪಯೋಗಿಸಿಕೊಳ್ಳಲು ಹಕ್ಕುಳ್ಳವರಾಗುತ್ತಾರಲ್ಲದೆ, ಈ ರೀತಿ ಮಹಾ ಯೋಜನೆಗಳಲ್ಲಿ ಜಮೀನುಗಳನ್ನು ನಿರ್ದಿಷ್ಟ ಉದ್ಯಾನವನ/ ಬಯಲು ಜಾಗೆ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವುದು ತಂತಾನೆ ರದ್ದಾಗುತ್ತದೆ. ಉಲ್ಲೇಖದಲ್ಲಿನ ದಿನಾಂಕ: 22.12.05 ರ ಸುತ್ತೋಲೆಯಲ್ಲಿ ಇಂತಹ ಪ್ರಕರಣಗಳಲ್ಲಿ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಮಾರ್ಗಸೂಚಿ ನೀಡಲಾಗಿತ್ತು.

ಆದರೆ, ಬಹುಪಾಲು ಪ್ರಾಧಿಕಾರಗಳು ಮಹಾ ಯೋಜನೆಯಲ್ಲಿ ಉದ್ಯಾನವನ/ ಬಯಲು ಜಾಗೆ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳುವಲ್ಲಿ ವಿಫಲವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಡಿಯಲ್ಲಿ ನೂರಾರು ಪ್ರಕರಣಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದವು. ಈ ರೀತಿ ಪ್ರಾಧಿಕಾರದ ಕೋರಿಕೆಯಂತೆ ಸರ್ಕಾರವು ಅನುಮತಿ ನೀಡಿದಲ್ಲಿ ಮಹಾ ಯೋಜನೆಯಲ್ಲಿ ಮೀಸಲಿಟ್ಟ ಉದ್ದೇಶಗಳಿಗೆ ಮೀಸಲಿಟ್ಟಿರುವ ಕ್ಷೇತ್ರವು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಿಲ್ಲ ಎಂಬ ಅಂಶವನ್ನು ಸರ್ಕಾರವು ಗಮನಿಸಿ ಇತ್ತೀಚೆಗೆ ಅಂತಹ ಪ್ರಕರಣಗಳಿಗೆ ಅನುಮೋದನೆ ನೀಡುವುದನ್ನು ತಡೆಹಿಡಿಯಲಾಗಿತ್ತು. ಇಂತಹ ಪ್ರಕರಣಗಳಲ್ಲಿ ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಅನೇಕ ಸಭೆಗಳನ್ನು ನಡೆಸಲಾಯಿತು.

ಸದರಿ ಸಭೆಗಳಲ್ಲಿ ಚರ್ಚಿಸಿದ ಅಂಶಗಳ ಆಧಾರದ ಮೇಲೆ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯದ ಆಧಾರದ ಮೇಲೆ ಮಹಾ ಯೋಜನೆಯಲ್ಲಿ ಉದ್ಯಾನವನ/ ಬಯಲು ಜಾಗೆ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಜಮೀನುಗಳನ್ನು ಸಂಬಂಧಿತ ಪ್ರಾಧಿಕಾರಗಳು ಮಹಾ ಯೋಜನೆ ಅನುಮೋದನೆಗೊಂಡ ೬ ವರ್ಷಗಳ ಒಳಗೆ ಭೂ ಸ್ವಾಧೀನಪಡಿಸಿಕೊಳ್ಳದೆ ಇದ್ದಲ್ಲಿ ಅಥವಾ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸದೇ ಇದ್ದಲ್ಲಿ ೬ ವರ್ಷಗಳ ನಂತರ ಅಂತಹ ನಿಗಧಿತ ಭೂ ಉಪಯೋಗಗಳು ತಾನಾಗಿಯೇ ರದ್ದಾಗುತ್ತವೆ ಎಂಬ ಅಂಶವನ್ನು ಸರ್ಕಾರವು ಗಮನಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಕ್ರಮ ವಹಿಸಲು ನಿರ್ದೇಶಿಸಲಾಗಿದೆ.

೧) ಮಹಾಯೋಜನೆಗಳಲ್ಲಿ ಕಾಯ್ದಿರಿಸಲಾಗಿರುವ ಉದ್ಯಾನವನ/ ಬಯಲು ಜಾಗೆ ಹಾಗೂ ಸಾರ್ವಜನಿಕ/ ಅರೆ ಸಾರ್ವಜನಿಕ ಉಪಯೋಗದ ಜಮೀನುಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು ಮಹಾ ಯೋಜನೆ ಅನುಮೋದನೆಯಾದ ೬ ವರ್ಷಗಳ ಒಳಗೆ ಲಭ್ಯ ಮೂಲಗಳಿಂದ ಆರ್ಥಿಕ ಸಹಾಯ ಪಡೆದು ಸ್ವಾಧೀನಪಡಿಸಿಕೊಳ್ಳಲು ಕಡ್ಡಾಯವಾಗಿ/ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಇಲ್ಲವೆ, ಕಾಯ್ದೆಯ ಅವಕಾಶದಂತೆ ಭೂ ಸ್ವಾಧೀನ ಪ್ರಕ್ರಿಯೆಯನ್ನಾದರೂ ಆರಂಭಿಸಬೇಕು.

೨) ಒಂದು ವೇಳೆ ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು ಇಂತಹ ಜಮೀನುಗಳನ್ನು ಅನಿವಾರ್ಯ ಕಾರಣಗಳಿಂದ ಅಥವಾ ಪ್ರಾಧಿಕಾರಗಳ ಆರ್ಥಿಕ ಬಿಕ್ಕಟ್ಟಿನಿಂದ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗದಿದ್ದಲ್ಲಿ ಅಥವಾ ಕನಿಷ್ಠ ಪಕ್ಷ ಭೂ ಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಲು ಸಾಧ್ಯವಾಗದೇ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಡಿಯಲ್ಲಿ ಭೂ ಉಪಯೋಗ ಬದಲಾವಣೆಗೆ ಅನುಮತಿಸಬಹುದಾಗಿದೆ. ಇಂತಹ ಪ್ರತಿ ಪ್ರಕರಣದಲ್ಲಿಯೂ ಸರ್ಕಾರದ ಪೂರ್ವಾನುಮತಿ ಪಡೆಯುವುದು.

೩) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69(2) ರಡಿಯಲ್ಲಿ ಭೂ ಉಪಯೋಗ ಬದಲಾವಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಸದರಿ ಜಮೀನುಗಳಲ್ಲಿ ಅನುಮತಿಸುವಂತಹ ಭೂ ಉಪಯೋಗ ಬದಲಾವಣೆಯು ಪ್ರಸ್ತಾಪಿತ ಜಮೀನಿನ ಅಕ್ಕಪಕ್ಕಗಳಲ್ಲಿ ಮಹಾಯೋಜನೆಯಲ್ಲಿ ನಿರ್ದಿಷ್ಟಪಡಿಸಿರುವಂತಹ ಭೂ ಉಪಯೋಗದ ಆಧಾರದ ಮೇಲೆ ನಿರ್ಣಯಿಸತಕ್ಕದ್ದು.

೪) ಇಂತಹ ಭೂ ಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 14-ಎ ರಂತೆ ಕ್ರಮ ಜರುಗಿಸುವ ಅಗತ್ಯವಿರುವುದಿಲ್ಲ.

(ಸಿ.ಟಿ.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:
೧) ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು.
೨) ಆಯುಕ್ತರುಗಳು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
೩) ನಗರ ಯೋಜನಾ ಸದಸ್ಯರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
೪) ಪದಸ್ಥ ಕಾರ್ಯದರ್ಶಿಗಳು, ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
೫) ಮುಖ್ಯಾಧಿಕಾರಿಗಳು, ಎಲ್ಲಾ ಪುರಸಭೆ ಯೋಜನಾ ಪ್ರಾಧಿಕಾರಗಳು.
೬) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
೭) ಕಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.